A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) A recommendation was made to Government of India to take up the construction of this Railway line.

ಶ್ರೀ ಡಿ. ದೇವರಾಜ ಅರಸ್.—ಕೇಂದ್ರ ಸರ್ಕಾರಕ್ಕೆ ತಮ್ಮ ಶಿಫಾರ್ಸು ಕಳುಹಿಸಿದುದು ಯಾವಾಗ? In the last Budget Session a resolution was passed.

Sri Kadidal MANJAPPA.—It has been communicated and I have also got a reply.

1 P.M.

ಶ್ರೀ ಡಿ. ದೇವರಾಜ ಅರಸ್.—ಭಾರತ ಸರ್ಕಾರದವರು ಈ ವಿಚಾರದಲ್ಲಿ ಏನು ಕಾರ್ಯಕ್ರಮ ಕೈಗೊಂಡಿದ್ದಾರೆಂಬುದನ್ನು ವಿಚಾರಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರಿಸಿದ್ದೇವೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಂಗಳೂರು-ಹಾಸನ ರೈಲ್ವೆ ಲೈನ್ ಬಿಟ್ಟು ಬೇರೆ ಯಾವುದೂ ಸಾಧ್ಯವಿಲ್ಲವೆಂದು ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಸೇರಿಸಿಕೊಳ್ಳುವಂತೆ ಭಾರತ ಸರ್ಕಾರಕ್ಕೆ ಶಿಫಾರ್ಸುಮಾಡಿ ಇದನ್ನು ಸೇರಿಸಲು ಸಾಧ್ಯವಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಯತ್ನ ಪಡುತ್ತೇವೆ.

ಶ್ರೀ ಡಿ. ದೇವರಾಜ ಅರಸ್.—ಈ resolution ಆಧಾರದ ಮೇಲೆ ಸರ್ಕಾರದವರು ಈ ಬಗ್ಗೆ preliminary survey ಮಾಡ್ಸುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ತಮ್ಮ ಸ್ಟೇಟ್ ರೇಜಿಸ್ಲೇಚರ್ ಅಭಿಪ್ರಾಯಕ್ಕೆ ಪುರಸ್ಕಾರ ಕೊಟ್ಟು ಅದನ್ನು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡುವುದು ತಮಗೆ ಸೇರಿದುದಲ್ಲವೇ?

Mr. SPEAKER.—They are doing it; that is what he said.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮದ್ದೂರು-ಮಳವಳ್ಳಿ ಮಾರ್ಗವಾಗಿ ರೈಲ್ವೆ ಲೈನ್ ಹಾಕುವ ವಿಚಾರವಾಗಿ ಈ ಅಸೆಂಬ್ಲಿಯಲ್ಲಿ ಹಿಂದೆ ರೆಸಲ್ಯೂಷನ್ ಆಗಿರಲಿಲ್ಲವೇ?

Sri Kadidal MANJAPPA.—That question does not arise strictly.

Desilting Venkateshsagara tank, Chintamani Taluk.

Q.—1016. **Sri M. C. ANJANEYA REDDY** (Chintamani).—

Will the Government be pleased to state:—

(*a*) the extent of capacity reduced as a result of accumulation of silt due to non-repair of sluices to Venkateshsagara tank in Chintamani Taluk;

(*b*) whether there is a scheme to repair that tank in the near future?

A.—**Sri Kadidal MANJAPPA** (Minister for Revenue and Public Works).—

(*a*) No survey has been conducted regarding accumulation of silt. Silt accumulation is not due to non-repair of sluice.

(*b*) Yes.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—'ಎ' ಭಾಗದ ಪ್ರಶ್ನೆಗೆ ಉತ್ತರವಾಗಿ ವೆಂಕಟೇಶ ಸಾಗರ ಕೆರೆಗೆ ಹೂಳು ತುಂಬಿರುವ ವಿಚಾರದಲ್ಲಿ ಸರ್ವೆ ಮಾಡಿಲ್ಲವೆಂದು ತಿಳಿಸಿದ್ದೀರಿ. ಈ ಅಂಶ ಅಲ್ಲಿನ ಅಸಿಸ್ಟೆಂಟ್ ಇಂಜನಿಯರಿಗೆ ಗೊತ್ತಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಸಿಲ್ಟ್ ತುಂಬಿಕೊಂಡಿರುವ ವಿಚಾರ ಗೊತ್ತಿರಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ಕೆರೆ ಚಿಂತಾಮಣಿ ತಾಲ್ಲೂಕಿನ ದೊಡ್ಡ ಕೆರೆ ಎಂದು ಭಾವಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಇಂಥ ವಿಚಾರಗಳನ್ನು ಭಾವಿಸುವುದಕ್ಕಾಗುವುದಿಲ್ಲ, ನಿರ್ಧರವಾಗಿ ಹೇಳಬೇಕು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ನಾನು ಆ ರೀತಿ ಅಭಿಪ್ರಾಯಪಡುತ್ತೇನೆ, ಅದನ್ನು ತಾವು ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನಂಬುತ್ತೇನೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ಕೆರೆಯ sluice ರಿಪೇರಿ ಮಾಡಿನದೇ ಇರುವ ಕಾರಣದಿಂದ ಸುಮಾರು 18 ಅಡಿಯಷ್ಟು ಹೂಳು ಮುಚ್ಚಿಕೊಂಡು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಜಾಗ್ರತೆ ಆ ಕೆರೆಯ ರಿಪೇರಿ ಕೆಲಸವನ್ನು ಕೈಗೊಳ್ಳಲು ಪ್ರಯತ್ನಪಡುತ್ತೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ವಿಚಾರವನ್ನು ಹಲವಾರು ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ನಿರ್ಲಕ್ಷ್ಯವಾಡುತ್ತಿರುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಇದು technical matter. ಆದಕಾರಣ ಇಂಥ ವಿಚಾರದಲ್ಲಿ ನಿರ್ಧಾರಕ್ಕೆ ಬರುವುದರಲ್ಲಿ ತಡವಾಗಿರಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ರೀತಿ ಹೂಳು ಮುಚ್ಚಿರುವುದರಿಂದ sluice ಗೆ ಅಡಚಣೆಯಾಗಿ ಅದರಿಂದ ಬಹಳ ತೊಂದರೆಯುಂಟಾಗಿದೆ ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—Silt ಇರುವುದು ತೂಬಿನಲ್ಲಿ ಹೋಗುವುದಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಇದಕ್ಕೆ covering sluices ಇಟ್ಟಿರುವುದು ಗೊತ್ತಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.